## 2

# ದೇವರ ಸರ್ವಜ್ಞಾನ:

## ನಮ್ಮ ದೇವರು "ಕಲಿತು ಕೊಳ್ಳುವವನು" ಅಲ್ಲ

ಮೂರನೆಯ ಮಿಲ್ಲೆನಿಯಂ A.D. ಪ್ರಾರಂಭದಲ್ಲಿ, ಜಗತ್ತಿನ ಔದ್ಯೋಗೀಕರಿಸುವ ಸಂಸ್ಕೃತಿಯಲ್ಲಿ ಶಿಕ್ಷಣದ ಬಗ್ಗೆ ಒತ್ತು ಹೇಳುವುದು ಹೆಚ್ಚು ಪ್ರಭಾವ ಶಾಲಿಯಾದ ಸಂಗತಿಯಾಗಿತ್ತು. ಆಧುನಿಕ ಸಂಸ್ಕೃತಿಯನ್ನು ಎದುರಿಸುತ್ತಿರುವ ಸಂಕೀರ್ಣಗಳೊಂದಿಗೆ ಹೊಂದಿಕೊಂಡು ಹೋಗುವುದಕ್ಕಾಗಿ ಒಬ್ಬನು ಮಾಹಿತಿಯನ್ನು ಹೊಂದಿಕೊಳ್ಳತಕ್ಕದ್ದು ಎಂದು ಅರುಹು ಹುಟ್ಟುತ್ತಲಿದೆ. ಮಾಹಿತಿಯ ಮಹತ್ತರವಾದ ಬೆಳವಣಿಗೆಯ ಮೇಲೆ ಇದು ಕುತೂಹಲ ಕೆರಳಿಸುವಂಥದ್ದಾಗಿದೆ.[1] ವಿಸ್ತರಿಸುತ್ತಿರುವ ಮುಂದುವರಿದ ಶಿಕ್ಷಣ ಕಾರ್ಯಕ್ರಮಗಳು ತಮ್ಮ ಮುಂದುವರಿದ ವಯಸ್ಸುಗಳಲ್ಲಿಯೂ ಬುದ್ಧಿಯ ಬೆಳವಣಿಗೆಗಾಗಿ ಜನರ ಅಪೇಕ್ಷೆಗೆ ಸಾಕ್ಷಿಯಾಗಿದೆ.

ತಿಳಿಯುವ ಅಪೇಕ್ಷೆಯಿಂದ ಮಾನವ ಸ್ವಭಾವವು ಲಕ್ಷಣ ಹೊಂದಿರುವಂತೆ ತೋರುತ್ತದೆ. ಎರಡು ವರ್ಷದ ಮಗುವಿನ ಚಟುವಟಿಕೆಗಳು ಕೃತಿಯಲ್ಲಿ ಕುತೂಹಲದ ಪ್ರದರ್ಶನವಿರುವುದು ದೃಢವಾಗುತ್ತದೆ. ಐದು ವರ್ಷ ಪ್ರಾಯದವರ ಕಠೋರವಾದ ಪ್ರಶ್ನೆಗಳು ಅನೇಕ ತಂದೆ ತಾಯಿಗಳನ್ನು ಆಶ್ಚರ್ಯಚಕಿತರನ್ನಾಗಿ ಮಾಡಿವೆ ಮತ್ತು ನಿರಾಶೆಗೊಳಿಸಿವೆ. ಹೆಚ್ಚು ಹೆಚ್ಚು ಕಲಿತು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯಮಾಡಲು ತಿಳಿಯಬೇಕೆಂಬುದರ ಅವಶ್ಯಕತೆಯಿಂದ ಕಲಿಯುವಿಕೆಯ ಮೇಲೆ ಒತ್ತೂ ಕೊಡಲ್ಪಡುತ್ತದೆ. ನಮಗೆ ಇನ್ನೂ ಏನು ಅಗತ್ಯವಿದೆ ಮತ್ತು ತಿಳಿಯಲು ಬಯಸುತ್ತದೆ ಎಂಬುದರಿಂದ ಅದು ಹೆಚ್ಚಾಗಿ ಪ್ರೇರೇಪಿಸಲ್ಪಟ್ಟಿದೆ - ನಾವು ಕಲಿಯ ಬಲ್ಲೆವು ಎಂದು ನಾವು ನಂಬುವದರಿಂದ ಪ್ರಯತ್ನವು ಮುಂದುವರಿಸಲ್ಪಟ್ಟಿರುವುದು. ಇದೆಲ್ಲವೂ ನಮಗೆ ಬಹಳ ಪರಿಚಿತವಾದದ್ದೇ. ಹುಡುಕಲು, ಪರಿಶೋಧಿಸಲು, ಸಾಧಿಸುವ ಅಪೇಕ್ಷೆಗಳು *ಮಾನವ ಸ್ವಭಾವದಲ್ಲಿ* ಸಹಜವಾಗಿರುವಂತೆ ಕಾಣುತ್ತದೆ. ಇದು ಮಾನವರಿಗಾಗಿ ಸಹಜವಾದದ್ದಾಗಿದೆ.

ಹೀಗಿದ್ದರೂ ಮಾನವರಾದ ನಾವು ನಮ್ಮ ಜ್ಞಾನದ ಸಂಗ್ರಹದಲ್ಲಿ ಅತ್ಯಾಸಕ್ತಿಯುಳ್ಳವರಾಗ ಬಹುದು. ತಾಂತ್ರಿಕ ಜ್ಞಾನದ ಯುಗವು ಜ್ಞಾನದ ಅತೀ ಹೆಚ್ಚು ಪರಿಣಿತಿಯೊಂದಿಗೆ ಅನೇಕ ಲಾಭಗಳನ್ನು ತಂದಿರುತ್ತದೆ. ಪ್ರದರ್ಶಿಸಲ್ಪಟ್ಟ ಸಾಧನೆಗಳ ದಕ್ಷತೆಯನ್ನು ನಾವು ವಂದಿಸುತ್ತೇವೆ. ಮಾನವ ಪ್ರಗತಿಯ ಈ ಶತಪ್ರಯತ್ನಕ್ಕೆ "ಕೆಳಗಿನ" ಭಾಗವಿರುವುದೋ? ಹೌದು. "ಸುಳ್ಳು - ಬೌದ್ಧಿಕತೆ" ಎಂದು ಕರೆಯಲ್ಪಡುವ ಸೊಂಕು ರೋಗವು ಹಬ್ಬುತ್ತಲಿದೆ. ಹಟಮಾರಿತನ, ದುಷ್ಟ ಪ್ರವೃತ್ತಿಗಳು ಮತ್ತು ಸತ್ಯವಲ್ಲದ ಭರವಸೆಗಳು, "ಮನುಷ್ಯನು ಎಲ್ಲಾ ಸಂಗತಿಗಳ ಅಳತೆಗೋಲು" ಎಂಬ ಕೀಳು ಮನೋಭಾವನೆ ಇತ್ಯಾದಿ ಲಕ್ಷಣಗಳು ಒಳಗೊಂಡಿದೆ. "ಮಾನವ ಕೇಂದ್ರವಾದ ದೈವತ್ವ"[2] (anthropocentric divinity) ಎಂದು ಕರೆಯಲ್ಪಡುವ ಈ ನಿಲುವು ಮಾನವ ಮನಸ್ಸಿನಲ್ಲಿ ಗಂಡಾಂತರಕಾರಿಯಾದ ಮೂಲ ತಪ್ಪನ್ನು ಮುಚ್ಚಿರುತ್ತದೆ. ನಮ್ಮ ಎಲ್ಲಾ ಅಂತರ್ಭಾವನೆಗಳೊಂದಿಗೆ ನಮ್ಮಲ್ಲಿ ಹೆಚ್ಚಾದವರು ನಮ್ಮ ಮೇಲಿರುವ ದೇವರನ್ನು ಒಪ್ಪಿಕೊಳ್ಳಲು ಸಾಕಷ್ಟಾದದ್ದನ್ನು ಇನ್ನೂ ಕಲಿತುಕೊಂಡಿರುವದಿಲ್ಲ. ನಮ್ಮ ಬೌದ್ಧಿಕ ಶಕ್ತಿಯು ಆತನ ಮುಂದೆ ಹಸುಗೂಸಿನಂಥ

ದ್ದಾಗಿರುವುದು (1 ಕೊರಿಂಥ 1:18-25).

ದೇವರ ಸರ್ವವ್ಯಾಪಕತ್ವಕ್ಕೆ ಸಮೀಪದ ಉಪಸಿದ್ಧಾಂತವು ಆತನ ಸರ್ವಜ್ಞಾನವಾಗಿದೆ: ದೇವರಿಗೆ ಅಪರಿಮಿತ, ವಿಶ್ವವ್ಯಾಪಿ, ಸಂಪೂರ್ಣ ಜ್ಞಾನವಿದೆ.[3] ಇದು ಪರಿಶುದ್ಧ ಬರಹಗಳಲ್ಲಿ ಒತ್ತಿ ಹೇಳಲ್ಪಟ್ಟಿದೆ. ದೇವರ ಬಗ್ಗೆ ತನ್ನ "ಸ್ನೇಹಿತರೊಂದಿಗೆ" ಮಾತಾಡುವಾಗ ಯೋಬನು, "ಆತನು ಭೂಮಿಯ ಕಟ್ಟಕಡೆಯ ತನಕ ದೃಷ್ಟಿಸಿ ಆಕಾಶದ ಕೆಳಗಿನ ಸಮಸ್ತವನ್ನೂ ನೋಡುವವನಾಗಿದ್ದಾನೆ" (ಯೋಬ 28:24) ಎಂದು ಹೇಳಿದನು. "ಯೆಹೋವನ ದೃಷ್ಟಿಯು ಎಲ್ಲೆಲ್ಲಿಯೂ ಇರುವುದುಣಿ ಆತನು ಕೆಟ್ಟವರನ್ನೂ ಒಳ್ಳೆಯವರನ್ನೂ ನೋಡುತ್ತಲೇ ಇರುವನು" (ಜ್ಞಾನೋಕ್ತಿ 15:3) ಎಂದು ಜ್ಞಾನೋಕ್ತಿಗಳ ಬುದ್ಧಿವಂತ ಮನುಷ್ಯನು ಹೇಳಿದನು. ದೇವರ ಸರ್ವಜ್ಞಾನದ ವಿಭಜನೆಗಳು ಅನೇಕವಿರುತ್ತವೆ. ಅಸಂಖ್ಯಾತ ಪ್ರಶ್ನೆಗಳನ್ನು ಕೇಳ ಬಹುದು. ಉದಾಹರಣೆಯ ವಿಧಾನದಿಂದ ಕೆಲವನ್ನು ಯೋಚಿಸೋಣ.

## ಅದು ಕೇಳುವ ಪ್ರಶ್ನೆಗಳು

ಮೇಲಿಂದ ಮೇಲೆ ಕೇಳುವ ಪ್ರಶ್ನೆ, "ದೇವರು ಹೇಗೆ ತಿಳಿಯುವನು?" ಎಂಬುದು. ಸರ್ವಜ್ಞಾನ ಮತ್ತು ಸರ್ವವ್ಯಾಪಕತೆಗಳು ನಿಕಟವಾದ ಗುಣಲಕ್ಷಣಗಳೆಂದು ನಾವು ಹೇಳಿದ್ದೇವೆ. "ನಿನಗೆ ಹೇಗೆ ಗೊತ್ತು?" ಎಂದು ಕಥೆ ಹೇಳುವವನಿಗೆ ಪ್ರಶ್ನೆ ಕೇಳಿದ್ದನ್ನು ಎಂದಾದರೂ ಕೇಳಿರುವಿರೋ. "ನಾನು *ಅಲ್ಲಿದ್ದೆನು!*" ಎಂದು ಪ್ರತಿಧ್ವನಿಸುವ ಉತ್ತರ ಸಿಗುವುದು. ಹೀಗೆಯೇ ಅಪರಿಮಿತ ಮಟ್ಟದಲ್ಲಿ ದೇವರೊಂದಿಗಿರುವುದು. ಆತನು ಎಲ್ಲಾ ಕಡೆಗಳಲ್ಲಿ ಇರುವನು. ಆತನು ಬಲ್ಲವನಾಗಿದ್ದಾನೆ. ಹೀಗಿದ್ದರೂ ದೇವರು ವರದಿಗಾರನಂತೆ ವಿಷಯಗಳನ್ನು ಸಂಗ್ರಹಿಸಿಕೊಳ್ಳುವದರಿಂದ ತಿಳಿದು ಕೊಂಡಿರುವನೆಂದು ತೀರ್ಮಾನಿಸಿಕೊಳ್ಳಬಾರದು. ನಾವು ದೇವರ ಸ್ವಭಾವವನ್ನು ಅಧ್ಯಯನ ಮಾಡುತ್ತಿದ್ದೇವೆ ಆದರೆ ಆತನ ಮಾನವತೆಯನ್ನು ಅಲ್ಲ ಎಂಬುದನ್ನು ಜ್ಞಾಪಕದಲ್ಲಿಟ್ಟು ಕೊಳ್ಳಬೇಕು. ಆತನು ಇರುವಾತನಾಗಿದ್ದಾನೆ ಎಂಬುದು ಆತನ ಸ್ವಭಾವವಾಗಿರುವಂತೆಯೇ ಆತನು ತಿಳಿದು ಕೊಳ್ಳುವುದೂ ದೇವರ ಸ್ವಭಾವವಾಗಿದೆ. ದೇವರು ಉಂಟಾಗುವುದಿಲ್ಲಣಿ ಆತನು ಇದ್ದಾನೇ. ದೇವರು ಕಲಿಯುವದಿಲ್ಲಣಿ ಆತನು ಆಗಲೇ ತಿಳಿದವನಾಗಿದ್ದಾನೆ. ದೇವರ ಸರ್ವವ್ಯಾಪಕತ್ವವು ತಾರ್ಕಿಕವಾಗಿ ದೇವರು ಹೇಗೆ ತಿಳಿದಿರುವನು ಎಂಬುದನ್ನು ನೋಡಲು ನಮಗೆ ಸಾಹಾಯ ಮಾಡುತ್ತದೆ.

ಕೆಲವು ಸಲ ಕೇಳಲ್ಪಡುವ ಇನ್ನೊಂದು ಪ್ರಶ್ನೆಯು, "ಯಾವ ವಿನಾಯಿತಿಯಿಲ್ಲದೇ ದೇವರು ಪ್ರತಿಯೊಂದನ್ನೂ ನಿಜವಾಗಿಯೂ ತಿಳಿದಿರುವನೋ?" ಎಂಬುದು. "ನಾನು ಹಾಗೆ ನಿರೀಕ್ಷಿಸುತ್ತೇನೆ. ಯಾಕಂದರೆ ಆತನು ಪ್ರತಿಯೊಂದನ್ನೂ ತಿಳಿದು ಕೊಳ್ಳ ದಿದ್ದರೆ, ಆತನು ತಿಳಿಯದೇ ಇರುವ ಒಂದು ಸಂಗತಿಯು ಆತನಿಗೆ ಮರಣಾಂತಿಕ ವಾದದ್ದಾಗಿದೆ. ಹೀಗೆ ಆತನು ದೇವರಾಗಿರುವದರಿಂದ ತೆಗೆದು ಹಾಕಲ್ಪಡುತ್ತಾನೆ" ಎಂಬುದು ಕೂಡಲೇ ಬರುವ ಉತ್ತರವಾಗಿರುತ್ತದೆ ಈ ಪ್ರಶ್ನೆಗೆ ಅತೀ ಜಾಗರೂಗತೆಯ ಉತ್ತರವು ಬೇಕಾಗುತ್ತದೆ. "ತಿಳಿದಿರು" ಎಂಬ ಮಾತು ಹೇಗೆ ಉಪಯೋಗಿಸಲ್ಪಟ್ಟಿದೆ ಎಂಬ ಯೋಚನೆಯನ್ನೂ ಇದು ಒಳಗೊಂಡಿರುತ್ತದೆ.[4]

ದೇವರು ತನ್ನನ್ನು ಆಂತರಿಕವಾಗಿ ತಿಳಿದು ಕೊಂಡಿರುತ್ತಾನೆ - ಆತನು ತನ್ನ ಬಗ್ಗೆ ಸಂಪೂರ್ಣವಾಗಿ ಅರಿತಿರುವವನಾಗಿದ್ದಾನೇ (1 ಯೋಹಾನ 1:5). ತನಗೆ ಬಾಹ್ಯ ವಾಗಿರುವ ಪ್ರತಿಯೊಂದನ್ನು - ಅಂದರೆ ಮಾನವರನ್ನು ಒಳಗೊಂಡ ಸೃಷ್ಟಿಯನ್ನು ಆತನು ತಿಳಿದುಕೊಂಡಿರುತ್ತಾನೆ (ಯೋಬ 34:21). ಈ ಸರ್ವ ಜ್ಞಾನವು ನಮ್ಮ ಆಂತರಿಕ ಜೀವಿ ಗಳಲ್ಲಿ ಆಳವಾಗಿ ಹೋಗುತ್ತದೆ. ನಮ್ಮ ಯೋಚನೆಗಳನ್ನು ದೇವರು ತಿಳಿದಿರುವನು

ಎಂದು ಕೀರ್ತನೆಗಾರನು ಹೇಳಿದ್ದಾನೆ (ಕೀರ್ತನೆ 139:2). ಹೌದು, ಯಾವ ವಿನಾಯಿತಿಯಿಲ್ಲದೇ ಪ್ರತಿಯೊಂದನ್ನೂ ದೇವರು ತಿಳಿದಿರುತ್ತಾನೆ.

ದೇವರು ಹೇಗೆ ತಿಳಿದು ಕೊಂಡಿದ್ದಾನೆ ಮತ್ತು ಎಷ್ಟರ ವರೆಗೆ ಆತನು ತಿಳಿದು ಕೊಂಡಿದ್ದಾನೆ ಎಂಬ ಪ್ರಶ್ನೆಗಳ ಮೇಲೆ ನಾವು ಇಲ್ಲಿಯವರೆಗೆ ಕೇಂದ್ರೀಕರಿಸಿ ರುವೆವು. ಇನ್ನೊಂದು ರೀತಿಯ ಪ್ರಶ್ನೆಯು ಪುನ ಪುನ ಕೇಳಲ್ಪಡುತ್ತದೆ: "ಒಂದು ವೇಳೆ ... ಯಾವುದೆ ಸಂಭವಿಸುತ್ತಿತ್ತೆಂಬುದನ್ನು ದೇವರು ತಿಳಿದು ಕೊಳ್ಳುವನೋ?" ಎಂಬುದು, ಈ ಪ್ರಶ್ನೆಗೆ ಉತ್ತರ ಕೊಡಲು ಪ್ರಾಮುಖ್ಯವಾಗಿ ಬೇಕಾದದ್ದು ಅದು ಸಾಮಾನ್ಯವಾಗಿ ಭವಿಷ್ಯದ ಬಗ್ಗೆ ಸಂಬಂಧಿಸಿದೆ ಎಂದು ಜ್ಞಾಪಿಸಿಕೊಳ್ಳುವುದು. ಅದು ಅನಿಶ್ಚಿತ ಸಂಭವವನ್ನು, ಘಟನೆಗಳ ಹಾದಿಯನ್ನು ಬದಲಾಯಿಸುವಂಥದ್ದನ್ನು, ಇನ್ನೂ ಸಂಭವಿಸದೇ ಇದ್ದಂಥದ್ದನ್ನು ಸೂಚಿಸುತ್ತದೆ. ಅನಿರೀಕ್ಷಿತವಾಗಿ ಸಂಗತಿಗಳು ಸಂಭವಿಸುವದನ್ನು, ವಿಸ್ಮಯಗಳು ಸಂಭವಿಸುವದನ್ನು ಯೋಚಿಸುವ ಮಾನವರಿಂದ ಕೇಳಲ್ಪಡುವ ಪ್ರಶ್ನೆ ಇದಾಗಿದೆ. ಹಾಗಿದ್ದರೂ ದೇವರು ಎಂದೂ ವಿಸ್ಮಯಗೊಳ್ಳುವದಿಲ್ಲ. ಹಿಂದಿನ, ಇಂದಿನ ಇಲ್ಲವೇ ಮುಂದಿನ ಆಕಸ್ಮಿಕಗಳ ಪರಿಣಾಮವನ್ನು ಆತನು ತಿಳಿದಿರುವಾತನಾಗಿದ್ದಾನೆ. "ಒಂದು ವೇಳೆ ... ಹೀಗಿದ್ದ ಪಕ್ಷದಲ್ಲಿ ಸಂಭವಿಸಬಹುದಿತ್ತು" ಹಾಗೆಯೇ "... ಒಂದು ಪಕ್ಷ ಹೀಗಿದ್ದರೆ ಸಂಭವಿಸುವುದು" ಎಂಬುದನ್ನು ಆತನು ತಿಳಿದಿರುವನು ಎಂದು ಬೇರೆ ಮಾತಿನಲ್ಲಿ ಹೇಳಬಹುದು. ತಾತ್ವಿಕವಾದದ್ದು ನಿಜವಾದದ್ದಾದರೆ ಅದು ಹೇಗಿರುವುದು ಎಂಬುದನ್ನು ಆತನು ತಿಳಿದಿರುತ್ತಾನೆ (ಮತ್ತಾಯ 11:21, 22). ಇದು ಆತನ ಸರ್ವಜ್ಞಾನದ ಅನಿವಾರ್ಯವಾದ ಪರಿಣಾಮವಾಗಿದೆ.

ದೇವರ ಸರ್ವವ್ಯಾಪಕತೆಯು ನಿತ್ಯತ್ವದಲ್ಲೆಲ್ಲಾ ಪ್ರತಿಯೊಂದು ಕಡೆಯಲ್ಲಿ ಏಕ ಕಾಲದಲ್ಲಿ ಆತನ ಪ್ರಸ್ತುತೆಯಾಗಿರುತ್ತದೆ. ಆತನ ಸರ್ವಜ್ಞಾನವು ನಿತ್ಯತ್ವದಲ್ಲೆಲ್ಲಾ ಪ್ರತಿಯೊಂದನ್ನು ಏಕ ಕಾಲದಲ್ಲಿ ತಿಳಿದುಕೊಂಡಿದ್ದಾಗಿರುತ್ತದೆ. ಮಾನವರ ದೃಷ್ಟಿಕೋನ ದಿಂದ, ದೇವರು ಪ್ರತಿಯೊಂದನ್ನು ತಿಳಿದಿದ್ದನು, ಪ್ರತಿಯೊಂದನ್ನು ತಿಳಿದಿರುವನು, ಪ್ರತಿಯೊಂದನ್ನು ತಿಳಿಯುತ್ತಾನೆ ಎಂದು ಹೇಳುತ್ತೇವೆ. ಇದು ನಮಗೆ ಹೇಳಲ್ಪಟ್ಟ ಬೈಬಲಿನ ಭಾಷೆಯಾಗಿರುತ್ತದೆ. ದೇವರ ದೃಷ್ಟಿಕೋನವು ಸಮಯಾತೀತವಾದದ್ದೂ ವಿಶ್ವವ್ಯಾಪಿಯಾದದ್ದೂ ಆಗಿದೆ. ಇದೆಲ್ಲದರ ಅರ್ಥ "ಒಂದು ವೇಳೆ" ("if") ಪ್ರಶ್ನೆಗಳು ಸುಳ್ಳುವಿಚಾರಗಳ ಮೇಲೆ ಅವಲಂಭಿಸಿದ್ದರೆ ಆಗುತ್ತದೆ. ಅದು ನಮ್ಮ ತಿಳುವಳಿಕೆಯ ಕೊರತೆಯಿಂದ ಬೆಳೆಯುತ್ತದೆ.

## ಅದು ಮುಂದಿಡುವ ಹೋರಾಟಗಳು

ದೇವರ ಸ್ವಭಾವದ ಎಲ್ಲವನ್ನು ತಿಳಿದ ಸಂಗತಿಗಳೊಂದಿಗೆ ನಮ್ಮ ಹೋರಾಟವು ಹಲವಾರು ಕಾರಣಗಳಿಂದ ಕಷ್ಟಕರವಾದದ್ದಾಗಿದೆ. (1) ದೇವರು ಹಾಗೂ ನಾವು ಭಿನ್ನ ವಾದ ಬೌದ್ಧಿಕ ಪರಿಮಾಣಗಳಲ್ಲಿದ್ದೇವೆ (ಯೆಶಾಯ 55:8, 9). (2) ದೇವರು ತನ್ನನ್ನು ಪ್ರಕಟಿಸುವವರೆಗೆ ಆತನು ಪರಿಚಿತನಾಗಿರುವದಿಲ್ಲ ಮತ್ತು ಆತನ ಪ್ರಕಟಣೆಯು ಆಯ್ಕೆಯಾದದ್ದೂ ಮಿತಿಯುಳ್ಳದ್ದೂ ಆಗಿರುತ್ತದೆ (ಧರ್ಮೋಪದೇಶಕಾಂಡ 29:29). (3) ದೇವರು ಕೊಟ್ಟ ಪ್ರಕಟನೆಯೂ ಸಹ ಸಾಕಷ್ಟಾಗಿದ್ದರೂ (2 ಪೇತ್ರ 1:3), ಅರ್ಥ ಮಾಡಿಕೊಳ್ಳುವುದು ಬಹಳ ಸಲ ಕಠಿಣವಾದದ್ದಾಗಿರುತ್ತದೆ (2 ಪೇತ್ರ 3:15, 16). (4) ನಾವು ಈ ಭೂಲೋಕದಲ್ಲಿ ಸಮಯದಿಂದ ಬಂಧಿಸಲ್ಪಟ್ಟಿದ್ದೇವೆ. ಆದುದರಿಂದ ಕೂಡಲೇ ಇರುವಂಥದ್ದನ್ನು ಅಂತ್ಯದ್ದೆಂದು ಯೋಚಿಸುತ್ತೇವೆ (ಯಾಕೋಬ 4:13-16). (5) ಹೆಚ್ಚು ಪ್ರಾಮುಖ್ಯವಾಗಿ, ನಮ್ಮ ತಿಳುವಳಿಕೆಯಲ್ಲಿ ನಾವು ಕೇವಲ ಮಿತಿಯುಳ್ಳ

ವರಾಗಿದ್ದೇವೆ. ಅಲ್ಲದೇ ನಮ್ಮ ಜೀವಿತಗಳಲ್ಲಿ ಪಾಪದ ಕುಂದೂ ಇರುತ್ತದೆ (ರೋಮಾಪುರ 3:23).

ಈ ಆತಂಕಗಳು ನಮ್ಮನ್ನು ನಿರಾಶೆಗೆ ನಡಿಸಬಹುದು. ಇದರಿಂದ ನಾವು ಕುಗ್ಗಿಸಲ್ಪಟ್ಟವರೂ ದಿಗಿಲು ಗೊಂಡವರೂ ಆಗಬಹುದು. ಮೊದಲಿನ ಆತಂಕವು ಜಯಿಸಲು ಅಸಾಧ್ಯವಾದದ್ದೆಂದು ಕಾಣಬಹುದು. "ದೇವರು ಸಂಪೂರ್ಣವಾಗಿ 'ಬೇರೆ ಯವನು' ಆಗಿದ್ದರೆ ಆತನೊಂದಿಗೆ ನಾವು ಸಂಪರ್ಕಿಸಲು ಹೇಗೆ ಪ್ರಾರಂಭಿಸಬಹುದು?" ಎರಡನೆಯ ಆತಂಕವು "ನಾವು ದೇವರನ್ನು ಹುಡುಕುವ ಆಯ್ಕೆ ಮಾಡಿದರೆ, ಆತನು ತನ್ನನ್ನು ಪ್ರಕಟಿಸಲ್ಪಡುವುದು ಆಯ್ಕೆಯಾದದ್ದೂ ಮಿತಿಯುಳ್ಳದ್ದೂ ಆಗಿದ್ದರೆ ನಾನೆಲ್ಲಿಗೆ ತಿರುಗಬೇಕು?" ಮೂರನೆಯ ಆತಂಕವು ಇನ್ನೊಂದು ನೋವನ್ನು ಒಳಗೊಂಡಿರುತ್ತದೆ: "ಪ್ರಕಟನೆಯನ್ನು ಅರ್ಥಮಾಡಿಕೊಳ್ಳುವುದೇ ಕಠಿಣವಾಗಿರುವುದೆಂದು ರುಜುವಾದರೆ ಆತನನ್ನು ನಾನು *ಆತನ ಪ್ರಕಟನೆಯಲ್ಲಿ* ಕಂಡು ಕೊಂಡಿದ್ದೇನೆಂದು ಹೇಗೆ ನಾನು ನಿಶ್ಚಯ ಹೊಂದಬಹುದು?" ನಾಲ್ಕನೆಯ ಆತಂಕವು ವ್ಯವಹಾರಿಕ ಪ್ರಶ್ನೆಯನ್ನು ಕೇಳುತ್ತದೆ "ತಕ್ಷಣವು - ಈಗ - ಅಂತಿಮವಾದದ್ದಾಗಿರದಿದ್ದರೆ, ದಿನದಿನದಲ್ಲಿ ನನ್ನ ಜೀವಿತವನ್ನು ಪರೀಕ್ಷಿಸಿ ಹೇಗೆ ನಿರ್ದೇಶಿಸಬಹುದು?" ಕೊನೆಯ ಆತಂಕವು ಗಂಭೀರವಾದ ಸಮಸ್ಯೆಯನ್ನು ಮುಂದಿಡುತ್ತದೆ: "ನಾನು ಪಾಪಿಯಾಗಿರುವದರಿಂದ ಯಾವ ತಳಹದಿಯ ಮೇಲೆ ನಾನು ಯಾವುದೇ ನಿರೀಕ್ಷೆಯನ್ನು ಬೆಳಸಿಕೊಳ್ಳಬಹುದು? ಇಲ್ಲಿ ಉಳಿದುಕೊಳ್ಳಲು ಯಾವಾಗಲೂ ಇದ್ದ ನನ್ನ ಆಂತರ್ಯವನ್ನು ಬಾಹ್ಯವನ್ನು ಯಾವಾಗಲೂ ತಿಳಿದುಕೊಂಡಿರುವ ದೇವರ ಮುಂದೆ ಅನಂತರದ ಬಗ್ಗೆ ಏನನ್ನು ಹೇಳದಿರಲು ಸಾಧ್ಯವಿದೆಯೋ?" ಇವು ಗಂಭೀರವಾದ ಪ್ರಶ್ನೆಗಳಾ ಗಿವೆ. ಅತೀ ಮಹತ್ವದ ಪ್ರಶ್ನೆಗಳಂತೆ ಅವುಗಳನ್ನು ಸುಲಭವಾಗಿ ಉತ್ತರಿಸಲಿಕ್ಕಾಗುವದಿಲ್ಲ. ಹಾಗಿದ್ದರೂ ಅವುಗಳಿಗೆ *ಉತ್ತರಕೊಡಬಹುದು.* ಮೇಲಿರುವಂಥ ನಿಜವಾಗಿ ಅವಶ್ಯವಿರುವ ಜೀವನ ಪ್ರಶ್ನೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ಪ್ರಯತ್ನಿಸುವೆವು.

ದೇವರ ಸರ್ವ ಜ್ಞಾನವನ್ನು ನಾವು ಅಧ್ಯಯನ ಮಾಡುತ್ತಿರುವಂತೆ ನಮ್ಮ ಮುಂದಿರುವ ಒಂದು ಸವಾಲು ಏನೆಂದರೆ, ಆತನ ಸರ್ವಜ್ಞಾನವು ಆತನ ಚಿತ್ತಕ್ಕೆ ಸಮಾನವಾದದ್ದಾಗಿರುವದಿಲ್ಲ ಎಂಬುದನ್ನು ಜ್ಞಾನಪಿಸಿಕೊಳ್ಳುವುದು. ಈ ಭಿನ್ನತೆಯು ಈಗ ಕೇಳಿದ ಕೆಲವು ಪ್ರಶ್ನೆಗಳಿಂದ ಕಾರಣವಾದ ಮಾನಸಿಕ ಉದ್ವೇಗಗಳನ್ನು ಕಡಿಮೆ ಮಾಡುತ್ತದೆ. ದೇವರು ಎಲ್ಲವನ್ನು ತಿಳಿದಿರುವಾತನು ಎಂಬುದರ ಅರ್ಥ ಸಂಭವಿಸುವ ಎಲ್ಲದಕ್ಕೂ ಆತನ ಚಿತ್ತವಿದೆ ಎಂದಾಗಿರುವದಿಲ್ಲ. ದೈವತ್ವದೊಂದಿಗೆ ಮಾನವ ಹೋಲಿ ಕೆಗಳು ಮಿತಿಯುಳ್ಳವುಗಳಾಗಿವೆ. ಆದರೆ ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡಲಿಕ್ಕೆ ಈ ರೂಢಿಯನ್ನು ಅವಲಂಬಿಸುತ್ತೇವೆ.

ಜನರು ತಮ್ಮನ್ನು ಯಾವುದೇ ದೈಹಿಕ ವ್ಯಾಧಿಯು ಮಾಡುವದಕ್ಕಿಂತ ಎಷ್ಟೋ ಹೆಚ್ಚಾದ ವಿನಾಶಗೊಳಿಸುವ ಮಾರ್ಗದಲ್ಲಿ ಬಲಹೀನರಾಗಿದ್ದೇವೆಂದು ಅಪರಿಮಿತ ಹಾಗೂ ವಿಶ್ವವ್ಯಾಪಿ ತಳಹದಿಯ ಮೇಲೆ ದೇವರು ತಿಳಿದು ಕೊಂಡಿದ್ದಾನೆ (ಯೆಶಾಯ 64:6)ಣಿ ಆದರೆ "ಯಾರಾದರೂ ನಾಶವಾಗಬೇಕೆಂಬುದು ಆತನ ಚಿತ್ತವಲ್ಲ, ಆದರೆ ಎಲ್ಲರೂ ಮಾನಸಾಂತರ ಪಡಬೇಕೆಂಬುದು ಆತನ ಚಿತ್ತವಾಗಿದೆ" (2 ಪೇತ್ರ 3:9ಣಿ NEB). ಆದುದರಿಂದ, ಆತನು ಶಿಕ್ಷಿತರನ್ನಾಗಿ ಮಾಡುತ್ತಾನೆ (ಯೋಹಾನ 6:45), ಎಚ್ಚರಿಸುತ್ತಾನೆ (ಲೂಕ 12:4, 5), ಹಾಗೂ ನಾಶದಲ್ಲಿರುವವರನ್ನು ಉಳಿಸುವದಕ್ಕಾಗಿ ಅವಶ್ಯವಿರುವ ಎಲ್ಲಾ ಸಹಾಯವನ್ನು ಒದಗಿಸುತ್ತಾನೆ (ಯೋಹಾನ 3:16).

## ಅದು ಒದಗಿಸುವ ಅರ್ಥವಿವರಣೆ

ಈಗ ನಾವು ಪರಿಶುದ್ಧ ಲೇಖಗಳಲ್ಲಿಯ ಪ್ರವಾದನೆಗಳನ್ನು ಯೋಚಿಸುವದರ ಕಡೆಗೆ ತಿರುಗೋಣ. ಪ್ರವಾದನೆಯು ಬಹಳ ಕಡೆಗಳಲ್ಲಿದ್ದು ಅದನ್ನು ನಾವು ತೆಗೆದು ಹಾಕಿದರೆ ಅಕ್ಷರಶ ವಾಗಿ ಬೈಬಲಿನ ಹತ್ತನೆಯ ಭಾಗವನ್ನು ತೆಗೆದು ಹಾಕಬೇಕಾಗುತ್ತದೆ. ಹಾಗಾದರೆ ಬೈಬಲು ತರ್ಕಬದ್ಧವಾದದ್ದೂ, ಸಮಂಜಸವಾದದ್ದೂ ಇಲ್ಲವೇ ಹೆಚ್ಚಾದ ಭಾಗವು ಓದಲಿಕ್ಕೆ ಯೋಗ್ಯವಾದದ್ದೂ ಆಗಿರುವದಿಲ್ಲ. ಪ್ರಮುಖ ಮತ್ತು ಚಿಕ್ಕ ಪ್ರವಾದಿಗಳ ಪುಸ್ತಕಗಳು ಐತಿಹಾಸಿಕ ಪುಸ್ತಕಗಳಲ್ಲಿ ಚದರಿ ಇರುವ ವಿಸ್ತಾರವಾದ ಪ್ರವಾದನೆಗಳು, ಯೇಸುವಿನ ಬೋಧನೆಗಳು ಹಾಗೂ ಹೇಳಿಕೆಗಳು ಮತ್ತು ಪ್ರವಾದನೆಯ ಗ್ರಂಥವು - ಇವೆಲ್ಲವುಗಳು ಇಲ್ಲದೇ ಇರುವ ಬೈಬಲನ್ನು ಕಲ್ಪಿಸಿಕೊಳ್ಳಿರಿ. ಪರಿಶುದ್ಧಬರಹದ ಈ ಭಾಗಗಳು ಬೈಬಲಿನೊಂದಿಗೆ ಅಖಂಡವಾಗಿ ಒಟ್ಟಾಗಿ ಇರದಿದ್ದರೆ ಅದು ಬೈಬಲ್ ಆಗಿರುವದಿಲ್ಲ. ಇದರಿಂದ ನಾವು ಏನನ್ನು ಕಂಡು ಕೊಳ್ಳುತ್ತೇವೆ? *ಬೈಬಲು ತನ್ನ ವಿಶಾಲವಾದ ಪ್ರವಾದಿಕ ಭಾಗಗಳೊಂದಿಗೆ ದೇವರ ಸರ್ವಜ್ಞಾನದ ಕನ್ನಡಿಯಾಗಿದೆ.* ಪ್ರವಾದನೆಯು ಮುಂತಿಳಿಸುವದಕ್ಕೆ ಮಿತಿಯುಳ್ಳದ್ದಾಗಿರದೇ ಇದ್ದರೂ ಇದು ಸತ್ಯವಾಗಿದೆ. ಪ್ರತಿಯೊಂದು ಪ್ರವಾದನೆಯು ನೆರವೇರುವವರೆಗೆ ಹಿಂದಿಡಲ್ಪಟ್ಟರೆ ಅದು ಸತ್ಯವಾದದ್ದಲ್ಲ. ಎಲ್ಲದಕ್ಕಿಂತಲೂ ಹೆಚ್ಚಾಗಿ ಪ್ರವಾದನೆಯ ನೆರವೇರುವಿಕೆಯು ಪ್ರವಾದಿಯ ವಿಶ್ವಾಸದ ಅರ್ಹತೆಯನ್ನು ಸ್ಥಾಪಿಸುತ್ತದೆಂದು ನಮಗೆ ತಿಳಿಸಲ್ಪಟ್ಟಿದೆ (ಧರ್ಮೋಪದೇಶಕಾಂಡ 18:22).


ಹೀಗಿದ್ದರೂ ಬೈಬಲಿನ ಅನೇಕ ಪ್ರವಾದನೆಗಳು ನೆರವೇರಿಸಲ್ಪಟ್ಟಿರುವದಿಲ್ಲ. ಹಲವಿನ್ನೂ ಚರಿತ್ರೆಯಲ್ಲಿ ನೆರವೇರಿಸಲ್ಪಡಲಿಕ್ಕಿವೆ: ಅನೇಕವು ಅಂತ್ಯ ಸಮಯಕ್ಕೆ ತೋರಿಸುತ್ತವೆ. ಹಾಗಾದರೆ, ಬೈಬಲಿನ ಪ್ರವಾದನೆಗಳು ದೇವರ ಸರ್ವಜ್ಞಾನವನ್ನು ಹೇಗೆ ಉದಾಹರಿಸುತ್ತವೆ? ಬೈಬಲಿನ ಸಮಯಗಳಲ್ಲಿ ಹೇಳಲ್ಪಟ್ಟ ಅನೇಕ ಪ್ರವಾದನೆಗಳು ಕೂಡಲೇ ಹೆಚ್ಚಾಗಿ ನೆರವೇರಿಸಲ್ಪಟ್ಟಿವೆಣಿ ಬೇರೆಯವುಗಳು ಸಂಬಂಧಿಕವಾಗಿ ಅಲ್ಪ ಸಮಯದಲ್ಲಿ ನೆರವೇರಿಸಲ್ಪಟ್ಟಿವೆ: ಇತರವುಗಳು ಶತಮಾನಗಳ ವರೆಗೆ ಕಾದುಕೊಂಡ ನಂತರ ನೆರವೇರಿಸಲ್ಪಟ್ಟಿವೆ.[5]

ಬೈಬಲಿನ ನೆರವೇರಿದ ಪ್ರವಾದನೆಯು ಐತಿಹಾಸಿಕವಾಗಿ - ಮಿತಿಗೊಳಿಸಲ್ಪಟ್ಟ ಮಾನವನು ದೇವರ ಪೂರ್ವಜ್ಞಾನ (*fore*knowledge) ಎಂದು ಕರೆಯಲ್ಪಡುವದರ ಅತ್ಯುತ್ತಮವಾದ ಉದಾಹರಣೆಯಾಗಿದೆ. "ಮುಂತಿಳಿಯುವಿಕೆ" ಅಂದರೆ "ಮುಂಚಿತವಾಗಿಯೇ ತಿಳಿಯುವುದು, ಇಲ್ಲವೇ ಮೊದಲುಣಿ ಅದರ ಮೊದಲಿನ ತಿಳಿಯುವಿಕೆ" ಎಂದರ್ಥ. ಈ ಪೂರ್ವಜ್ಞಾನವು ನಿಜವಾಗಿಯೂ ಘಟನೆಗಳ "ಸಾಮಾನ್ಯ" ಕ್ರಮವನ್ನು ತಿರುವು ಮುರುವಾಗಿ ಇಡುತ್ತದೆ. ಒಂದು ಘಟನೆಯ ನಮ್ಮ ತಿಳುವಳಿಕೆಯು ಘಟನೆಯು ಸಂಭವಿಸಿದ *ನಂತರ* ಬರುತ್ತದೆ. ಮೊದಲೇ ನಾವು ತಿಳಿದು ಕೊಂಡಿರುತ್ತೇವೆಂದು ಯೋಚಿಸುತ್ತೇವೆ. ಯಾವುದೇ ಘಟನೆ ಸಂಭವಿಸುವುದು ಎಂದು ನಾವು ಬಹಳ ನಿಶ್ಚಿತತೆಯುಳ್ಳವರಾಗಿರಬಹುದು. ತಪ್ಪಾಗಿರುವುದು ನಮಗೆ ಮುಜುಗರವಾದದ್ದಾಗಿರುವುದಲ್ಲವೇ? ಕೆಲವು ಸಲ ಹಾಗಿರುವದೆಂದು ನಿಮಗೆ ತಿಳಿದೇ ಇದೆ.

ದೇವರು ತಪ್ಪಾಗಿರುವದಿಲ್ಲ. ಯಾವುದು ಸಂಭಂವಿಸಿತು, ಯಾವುದು ಸಂಭವಿಸುತ್ತಲಿದೆ ಹಾಗೂ ಚರಿತ್ರೆಯಲ್ಲಿ (ಸಮಯದಲ್ಲಿ) ಏನು ಸಂಭವಿಸಲಿದೆ ಎಂಬುದನ್ನು ಆತನು ನಿತ್ಯತ್ವದಲ್ಲಿ ತಿಳಿದಿರುವನು. ನಾವು ಹಾಗೂ ಬೈಬಲಿನ ಬರಹಗಳು ದೇವರ ಪೂರ್ವ ಜ್ಞಾನವನ್ನು (ಮುಂತಿಳಿಯುವಿಕೆಯನ್ನು) ಏನೆಂದು ಕರೆಯುವೆವೋ ಅದು ಒಂದು ಮಿತಿಯುಳ್ಳ ಮಾರ್ಗದಲ್ಲಿ ಆತನ ಮಿತಿಯಿಲ್ಲದ ಮನಸ್ಸಿನ ವಿವರಣೆಯಾಗಿದೆ (ಅಪೊಸ್ತಲರ ಕೃತ್ಯ 2:23ಣಿ ರೋಮಾಪುರ 11:2ಎ). ಅದು ಬೇರೆಯಾಗಿ ಇರಲಿಕ್ಕಾಗುವದಿಲ್ಲ. ನಾವು

ಆತನನ್ನು ಆತನ ಪರಿಪೂರ್ಣತೆಯಲ್ಲಿ ಹಾಗೂ ಆತನ ದೃಷ್ಟಿಕೋನದಿಂದ "ನೋಡ ಬೇಕು" ಎಂದು ದೇವರು ಅಪೇಕ್ಷಿಸಿದ್ದರೆ, ಆತನು ನಿಶ್ಚಯವಾಗಿಯೂ ದೃಷ್ಟಿಕೋನ ವನ್ನು ಒದಗಿಸುತ್ತಿದ್ದನು. ಆದರೆ ನಾವು ಪಾಪಿಗಳಾಗಿರುವಂತೆ, ನಾವೀಗ ಇರುವಂತೆ ಮಾನವರಾಗಿರುತ್ತಿರಲಿಲ್ಲ.

ದೇವರ ಸರ್ವಜ್ಞಾನವನ್ನು ನೋಡಲಿಕ್ಕೆ ನಮಗೆ ಈ ಕೆಳಗಿನ ಯೋಜನೆಯು ಸಹಾಯ ಮಾಡಬಹುದು:




ಆಕೃತಿಯ ಹೊರಗಣ ಅಂಚು ನಿತ್ಯತ್ವವು ಮಿತಿಯುಳ್ಳದ್ದೆಂದು ಅರ್ಥಕೊಡುವದಿಲ್ಲ. ಒಳಗಿನ ಚೌಕೋನವೂ ಲೌಕಿಕವಾದ ಪ್ರತಿಯೊಂದನ್ನು ಅಂದರೆ ಸಮಯ ಬಂಧಿತ ವಾದದ್ದನ್ನು ಪ್ರತಿನಿಧೀಕರಿಸುತ್ತದೆ. ಒಳಗಿನ ಚೌಕೋನದಲ್ಲಿಯ ಯಾದಿ ಮಾಡಲ್ಪಟ್ಟ ಪ್ರತಿಯೊಂದೂ ದೇವರನ್ನು ಹೊರತು ಪಡಿಸಿ ಎಲ್ಲವೂ ಅಂತ್ಯಗೊಳ್ಳುವುದು. ಆತನು ಒಂದೇ ಕಾಲದಲ್ಲಿ ಸಮಯ ಮತ್ತು ನಿತ್ಯತ್ವದಲ್ಲಿ ಅಸ್ತಿತ್ವದಲ್ಲಿರುವುದು. ಸಮಯವು ಮುಗಿದಾಗ ರಕ್ಷಿಸಲ್ಪಟ್ಟವರು ಹಾಗೂ ದೇವರು ನಿತ್ಯತ್ವದಲ್ಲಿ ನಿತ್ಯವಾಗಿ ಅಸ್ತಿತ್ವದಲ್ಲಿರುವರು. ದೇವರು ತನ್ನ ಸರ್ವವ್ಯಾಪಕತ್ವ ಮತ್ತು ಸರ್ವಜ್ಞಾನದಲ್ಲಿ ಅದೆಲ್ಲವನ್ನೂ "ನೋಡು ತ್ತಾನೆ." ಅದೆಲ್ಲವನ್ನೂ "ನೋಡುವುದು" ನಮಗೆ ಕಷ್ಟಕರವಾದದ್ದು, ನಿಜವಾಗಿಯೂ ಅಸಾಧ್ಯವಾದದ್ದೂ ಆಗಿರುವುದು. ಭವ್ಯವಾದ ದೂರದೃಷ್ಟಿಯು ಪೌಲನ ಈ ಕೆಳಗಿನ ಆವೇಶದ ಆಶ್ಚರ್ಯವಾದ ಮಾತನ್ನು ನಾವು ಮೆಚ್ಚಿಕೊಳ್ಳುವಂತೆ ಮಾಡುತ್ತದೆ:

> ಆಹಾ, ದೇವರ ಐಶ್ವರ್ಯವೂ ಜ್ಞಾನವೂ ವಿವೇಕವೂ ಎಷ್ಟೋ ಅಗಾಧ! ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ! ಆತನ ಮಾರ್ಗಗಳು ಕಂಡು ಹಿಡಿಯುವದಕ್ಕೆ ಎಷ್ಟೋ ಅಸಾಧ್ಯ! ... ಸಮಸ್ತವು ಆತನಿಂದ ಉತ್ಪತ್ತಿಯಾಗಿ ಆತನಿಂದ ನಡೆಯುತ್ತಾ ಆತನಿಗಾಗಿ ಇರುತ್ತದೆ. ಆತನಿಗೇ ಸದಾಕಾಲವೂ ಸ್ತೋತ್ರ. ಆಮೇನ್ (ರೋಮಾಪುರ 11:33-36).

---

ಟಿಪ್ಪಣಿಗಳು

[1]Philip Elmer-DeWitt, "Battle for the Soul of the Internet," *Time* 144 (July

1994): 50-55. [2]*Anthropos* ಎಂಬುದು ಸಾಮಾನ್ಯ ಮನುಷ್ಯನಿಗಾಗಿ ಗ್ರೀಕ್ ಪದವಾಗಿದೆ. "Anthropocentric" ಅಂದರೆ "ಮಾನವನು ಕೇಂದ್ರವಾಗಿರುವ" ಎಂದರ್ಥ. "ದೈವತ್ವವು" ದೈವತ್ವಕ್ಕೆ ಇಲ್ಲವೇ ದೇವರಿಗೆ ಸಂಬಂಧಿಸಿದೆ. ಮನುಷ್ಯನು ತನ್ನ ಸ್ವಂತ ದೃಷ್ಟಿಯಲ್ಲಿ ಎಲ್ಲವುಗಳ ಕೇಂದ್ರವಾಗಿ ದೈವೀಕರಿಸಲ್ಪಟ್ಟಿದ್ದಾನೆ. [3]E. H. Ijams, *The Reality of God* (Nashville: Williams, 1978), 12, 120. [4]ಈ ವಿಚಾರಣೆಯಲ್ಲಿ ನಾವು ಹೇಗೆ ತಿಳಿದಿರುವೆವು ಎಂಬುದನ್ನು ಯೋಚಿ ಸುತ್ತಿರುವದಿಲ್ಲ. ನಾವು ಹೊಂದಿಕೊಳ್ಳುವ ಕೆಲವು ತಿಳುವಳಿಕೆಯು ಅನುಭವಕ್ಕೆ ಸಂಬಂಧಿಸಿರುತ್ತದೆ. [5]1 ಅರಸುಗಳು 11:29-32/12:15, 20ಣಿ 1 ಅರಸುಗಳು 21:23ಣಿ 2 ಅರಸುಗಳು 9:31-37/2 ಅರಸುಗಳು 19:20-37ಣಿ ಯೆಶಾಯ 40:3/ಮತ್ತಾಯ 3:3ಣಿ ಯೆಶಾಯ 42:1-4 /ಮತ್ತಾಯ 12:18-21ಣಿ ಯೋವೇಲ 2:28-32/ಅಪೊಸ್ತಲರ ಕೃತ್ಯ 2:16-21ಣಿ ಇತ್ಯಾದಿ.

---

## ಎಲ್ಲಾ ಜೀವಿಗಳ ಕರ್ತ, ದೂರದಲ್ಲಿ ಸಿಂಹಾಸನಾರೂಢ

ಎಲ್ಲಾ ಜೀವಿಗಳ ಕರ್ತನೇ, ದೂರದಲ್ಲಿ ಸಿಂಹಾಸನಾರೂಢನೆ,
ನಿನ್ನ ಮಹಿಮೆ ಸೂರ್ಯನಿಂದ, ಸಕ್ಷತ್ರದಿಂದ ಪ್ರಜ್ವಲಿಸುವುದುಣಿ
ಪ್ರತಿಯೊಂದರ ಕೇಂದ್ರ ಮತ್ತು ಪ್ರಾಣ,
ಆದಾಗ್ಯೂ ಪ್ರತಿಯೊಂದು ಪ್ರೀತಿಸುವ ಹೃದಯಕ್ಕೆ ನೀನೆಷ್ಟು ಹತ್ತಿರ!

ನಮ್ಮ ಜೀವನ ಸೂರ್ಯನೆ, ಚುರುಕುಗೊಳಿಸುವ ನಿನ್ನ ಕಿರಣ,
ನಮ್ಮ ಹಾದಿಯಲ್ಲಿ ದಿನದ ಬೆಳಕನ್ನು ಚಲ್ಲುವುದು.
ನಮ್ಮ ನಿರೀಕ್ಷೆಯ ನಕ್ಷತ್ರವೇ, ನಿನ್ನ ಮೃದುವಾದ ಬೆಳಕು
ರಾತ್ರಿಯ ದೀರ್ಘ ಜಾವಗಳಲ್ಲಿ ಸಂತೋಷ ನೀಡುವುದು.

ನಮ್ಮ ಮಧ್ಯರಾತ್ರಿ, ನಿನ್ನ ನಗೆ ಹಿಂತೆಗೆಯಲ್ಪಟ್ಟದ್ದುಣಿ
ನಮ್ಮ ಮಧ್ಯಾಹ್ನ, ನಿನ್ನ ಕೃಪೆಯ ಉದಯಣಿ
ನಮ್ಮ ಮಳೆಬಿಲ್ಲ ಕಮಾನು, ನಿನ್ನ ದಯೆಯ ಸಂಕೇತ
ಪಾಪದ ಮೋಡಗಳನ್ನು ಬಿಟ್ಟರೆ, ಎಲ್ಲವೂ ನಿನ್ನವುಗಳೇ!

ಸರ್ವ ಜೀವನ ಒಡೆಯನೇ, ಕೆಳಗೂ, ಮೇಲೂ,
ನಿನ್ನ ಬೆಳಕು ಸತ್ಯ, ನಿನ್ನ ಬಿಸಿಯು ಪ್ರೀತಿ,
ಸದಾಗಾಲ ಹೊಳೆಯುವ ನಿನ್ನ ಸಿಂಹಾಸನದ ಮುಂದೆ
ನಮ್ಮ ಸ್ವಂತ ಕಾಂತಿಯನ್ನು ಕೇಳಲಾರೆವು.

ನಮ್ಮನ್ನು ಸ್ವತಂತ್ರರನ್ನಾಗಿ ಮಾಡಲು,
ನಿನ್ನ ಸತ್ಯವನ್ನು ನಿನಗಾಗಿ ಉರಿಯುವ ಬೆಳಕಿನ ಹೃದಯವನ್ನು ನಮಗೆ ಕೊಡುಣಿ
ನಿನ್ನ ಜೀವನದ ಎಲ್ಲಾ ಪೀಠಗಳನ್ನು ಕೇಳುವವರೆಗೆ,
ಒಂದು ಪವಿತ್ರ ಬೆಳಕನ್ನು, ಒಂದು ಪರಲೋಕದ ಜ್ವಾಲೆಯನ್ನು ನಮಗೆ
ಕೊಡು.

ಅಮೇರಿಕದ ಕವಿ ಓಲಿವರ್ ವೆಂಡೆಲ್ ಹೋಲ್‌ಮ್ಸ್ (1809-1894) ಬರೆದ ಈ ಮಾತುಗಳು "ದೇವರ ಸರ್ವವ್ಯಾಪಕತ್ವದ ಬಗ್ಗೆ ಇಂಗ್ಲೀಷ್ ಭಾಷೆಯಲ್ಲಿಯ ಅತ್ಯುನ್ನತ ವಾದ ಹೇಳಿಕೆ" ಎಂದು ಕರೆಯಲ್ಪಟ್ಟಿದೆ. (Quoted by permission of ACU Press, Abilene, Tex., ಇತರ ಎಲ್ಲಾ ಹಕ್ಕುಗಳು ಕಾದಿರಿಸಲ್ಪಟ್ಟಿವೆ.)